# ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

**ಕೇಂದ್ರ ಕಛೇರಿ : ಗೋಕುಲ ರಸ್ತೆ : ಹುಬ್ಬಳ್ಳಿ**

(ಅಂಕಿಸಂಖ್ಯಾ ಇಲಾಖೆ)

ಸಂ.ವಾಕರಸಾ/ಕೇಕ/ಅಂಸಂ/ 178 /2016-17.

ದಿನಾಂಕ: 03/07/17 -05-2017

ಗೆ,
ಮುಖ್ಯ ಮೌಲ್ಯಮಾಪನ ಅಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ,
**ಬೆಂಗಳೂರು.**

**ಮಾನ್ಯರೆ,**

**ವಿಷಯ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೌಲ್ಯಮಾಪನ ವರದಿಯ ಮೇಲೆ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಅನುಸರಣಾ ವರದಿ ಸಲ್ಲಿಸುವ ಕುರಿತು.

**ಉಲ್ಲೇಖ:** ಕೆಇಎ 275 ಇವಿಎನ್ 2016 ದಿ: 24-10-2016

-- * --

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೌಲ್ಯಮಾಪನ ವರದಿಯ ಅಧ್ಯಾಯ-10 & 11 ರಡಿಯಲ್ಲಿ ಅಧ್ಯಯನ ತಂಡದ ಸದಸ್ಯರು ಮಾಡಿರುವ ವಿವಿಧ ಸಲಹೆ ಮತ್ತು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

**ಅಧ್ಯಾಯ-10.**

1. **ಇನ್ಸೆಂಟಿವ್ ಸ್ಕೀಮ್** (Incentive Scheme) : ಪ್ರಸ್ತುತವಾಗಿ ಪ್ರತಿದಿನ ಕರ್ತವ್ಯ ನಿರ್ವಹಿಸಿದ ಚಾಲನಾ ಸಿಬ್ಬಂದಿಗಳಿಗೆ ಆಯಾ ಅನುಸೂಚಿಗಳ ಆದಾಯದ ಮೇಲೆ ತಲಾ ಶೇಕಡಾ 1.0 ರಷ್ಟು ಪ್ರೋತ್ಸಾಹಕ ಧನ (ಇನ್ಸೆಂಟಿವ್) ನೀಡಲಾಗುತ್ತಿದೆ. ಅಲ್ಲದೇ ಸಂಸ್ಥೆಯ ಘಟಕಗಳಲ್ಲಿ ನಿರ್ದಿಷ್ಟ ಅವಧಿಗೆ ಉತ್ತಮ ಸಾರಿಗೆ ಆದಾಯ, ಹೆಚ್ಚಿನ ಕೆಎಂಪಿಎಲ್ ತರುವ ಚಾಲನಾ ಸಿಬ್ಬಂದಿಗಳಿಗೆ ನಗದು ಬಹುಮಾನ ಹಾಗೂ ಶ್ಲಾಘನೀಯ ಪ್ರಶಸ್ತಿ ನೀಡುವ ಪದ್ಧತಿ ಚಾಲ್ತಿಯಲ್ಲಿರುತ್ತದೆ. ಹೆಚ್ಚುವರಿಯಾಗಿ ಕಡಿಮೆ ರದ್ಧತಿ ಸೇರಿದಂತೆ ಇತರೆ ಅಂಶಗಳ ಮೇಲಿನ ಸಾಧನೆಗಾಗಿ ಪ್ರೋತ್ಸಾಹಕ ಧನ ಯೋಜನೆ (ಇನ್ಸೆಂಟಿವ್ ಸ್ಕೀಮ್) ಅಳವಡಿಸಿಕೊಳ್ಳುವ ಕುರಿತು ಪರಿಶೀಲಿಸಲಾಗುವುದು.
2. ಪ್ರಸ್ತುತ ಸಂಸ್ಥೆಯ ವ್ಯಾಪ್ತಿಯ 49 ಘಟಕಗಳಲ್ಲಿ ಒಟ್ಟು 6850 ETM (Electronic Ticket Machine) ಅಳವಡಿಸಲಾಗಿದೆ.
3. **ಜಿಪಿಎಸ್ ಟೆಕ್ನಾಲಜಿ** (GPS Technology): ಪ್ರಸ್ತುತವಾಗಿ 28 ತನಿಖಾ ವಾಹನಗಳಿಗೆ ಜಿಪಿಎಸ್ ಟೆಕ್ನಾಲಜಿ ಅಳವಡಿಸಲಾಗಿದೆ. ಮತ್ತು 4633 ಬಸ್ಸುಗಳಿಗೆ ಜಿಪಿಎಸ್ ಟೆಕ್ನಾಲಜಿ ಹಾಗೂ 82 ಬಸ್ ನಿಲ್ದಾಣಗಳಲ್ಲಿ LED ಫಲಕಗಳನ್ನು ಅಳವಡಿಸಲು ಕರಾರಸಾಸಂಸ್ಥೆಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.
4. **ಬಯೋಮೆಟ್ರಿಕ್ ಅಟೆಂಡೆನ್ಸ್ ಸಿಸ್ಟಂ** (Biometric Attendance System): ಸಂಸ್ಥೆಯ ವ್ಯಾಪ್ತಿಯ ಕೇಂದ್ರ ಕಛೇರಿ, ವಿಭಾಗೀಯ ಕಛೇರಿ, ವಿಭಾಗೀಯ ಕಾರ್ಯಾಗಾರ, ಘಟಕ, ಪ್ರಾದೇಶಿಕ ಕಾರ್ಯಾಗಾರ ಮತ್ತು ಪ್ರಾದೇಶಿಕ ತರಬೇತಿ ಕೇಂದ್ರಗಳಲ್ಲಿ ಆಧಾರ ಕಾರ್ಡ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು

15/7
CT/CE

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 793
ದಿನಾಂಕ 15/07/2017
ಗಣಕ ಸಂಖ್ಯೆ............
ದಿನಾಂಕ ............

ಅಳವಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಈ ಪೈಕಿ ಈಗಾಗಲೇ ಕೇಂದ್ರ ಕಛೇರಿಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದೆ.

5. Brand Ambassadors of NWKRTC: ಈ ಕುರಿತು ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಅಗತ್ಯ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

**ಅಧ್ಯಾಯ–11.**

1. ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ MoRTH ಹಾಗೂ MOUD ಇಲಾಖೆ ಯಿಂದ ಮಂಜೂರಾದ ITMS ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಯೋಜನೆಯಡಿಯಲ್ಲಿ Autometic Vehicle Location and Real Time Passanger information System ಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಅದೇ ರೀತಿ ಎಲ್ಲಾ MIS Report (Decision Information Matrix) ಗಳನ್ನು ಸಮಗ್ರೀಕರಣಗೊಳಿಸಲಾಗುವುದು.
2. Developing new information outputs: ವಾಹನವಾರು, ಸೇವಾ ಮಾದರಿವಾರು, ಮಾರ್ಗವಾರು ಸಾರಿಗೆ ಆದಾಯ ಹಾಗೂ ನಷ್ಟಗಳ ಕುರಿತು ಅಗತ್ಯ ತಖ್ತೆಗಳು ಹಾಗೂ ಕಡಿಮೆ ಪ್ರಗತಿ ಸಾಧಿಸಿದ ವಿಭಾಗ/ಘಟಕ, ಅನುಸೂಚಿಗಳು ಸೇವಾ ಮಾದರಿ ಹಾಗೂ ಕಡಿಮೆ ಈಪಿಕೆಎಂ/ಕೆಎಂಪಿಎಲ್ ಸಾಧನೆ ಮಾಡಿದ ಚಾಲನಾ ಸಿಬ್ಬಂದಿಗಳ ಕುರಿತು ಮಾಹಿತಿಯುಳ್ಳ ತಖ್ತೆಯನ್ನು ಈಗಾಗಲೇ ನಿಯಮಿತವಾಗಿ ಸಿದ್ಧಪಡಿಸಲಾಗುತ್ತಿದೆ. ಸದರಿ ತಖ್ತೆಗಳ ಮಾಹಿತಿಗಳ ಆಧಾರದ ಮೇಲೆ ಅಗತ್ಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
3. ಸಾರಿಗೆ ಆದಾಯ ಸೇರಿದಂತೆ ಇತರೆ ಕಾರ್ಯಾಚರಣೆ ಅಂಶಗಳ ಮೇಲೆ ಈಗಾಗಲೇ ಕಾರ್ಯಯೋಜನೆ ರೂಪಿಸಲಾಗಿದೆ. ಕೇಂದ್ರ ಕಛೇರಿ ಹಾಗೂ ವಿಭಾಗ ಮಟ್ಟದಲ್ಲಿ ವಾರಾಂತ್ಯ/ಮಾಸಾಂತ್ಯ ಸಭೆಗಳನ್ನು ನಡೆಸಿ ಕಾರ್ಯಯೋಜನೆಗನುಗುಣವಾಗಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದೆ.
4. ಪ್ರಸ್ತುತವಾಗಿ 28 ತನಿಖಾ ವಾಹನಗಳಿಗೆ ಜಿಪಿಎಸ್ ಟೆಕ್ನಾಲಜಿ ಅಳವಡಿಸಲಾಗಿದೆ. ಮತ್ತು 4633 ಬಸ್ಸುಗಳಿಗೆ ಜಿಪಿಎಸ್ ಟೆಕ್ನಾಲಜಿ ಹಾಗೂ 82 ಬಸ್ ನಿಲ್ದಾಣಗಳಲ್ಲಿ LED ಫಲಕಗಳನ್ನು ಅಳವಡಿಸಲು ಕರಾರಸಾಸಂಸ್ಥೆಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.
5. ಹೆಚ್ಚಿನ ಅಪಘಾತಗೊಳಿಸುವ ಚಾಲನಾ ಸಿಬ್ಬಂದಿಗಳನ್ನು ಗುರುತಿಸಿ ಅವರಿಗೆ ಅಗತ್ಯ ತರಬೇತಿಯನ್ನು ಮಾನವ ನಿರ್ವಹಣೆ ಪದ್ಧತಿಯಡಿಯಲ್ಲಿ (Manual System) ನೀಡಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಸಿಮ್ಯುಲೇಟರ್ ಮೂಲಕ ತರಬೇತಿ ನೀಡುವ ಕುರಿತು ಪರಿಶೀಲಿಸಲಾಗುವುದು.
6. ಪ್ರಸ್ತುತ ಸಂಸ್ಥೆಯಲ್ಲಿನ ಘಟಕ ವ್ಯವಸ್ಥಾಪಕರು ಹಾಗೂ ಇತರೆ ಅಧಿಕಾರಿಗಳಿಗೆ ನಿಯಮಿತವಾಗಿ ಒತ್ತಡ ನಿರ್ವಹಣೆ ಸೇರಿದಂತೆ ಇತರೆ ವಿವಿಧ ವಿಷಯಗಳ ಮೇಲೆ ನಿಯಮಿತವಾಗಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗುತ್ತಿದೆ.
7. ಈಗಾಗಲೇ ಸಂಸ್ಥೆಯ ವ್ಯಾಪ್ತಿಯ ದೊಡ್ಡ ನಗರಗಳಾದ ಹುಬ್ಬಳ್ಳಿ & ಬೆಳಗಾವಿಯಲ್ಲಿ ಪಿಪಿಪಿ/ಬಿಓಟಿ ಆಧಾರದ ಮೇಲೆ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಲು ಟೆಂಡರ್ ಕರೆಯಲಾಗಿತ್ತು. ಆದರೆ, ಯಾವುದೇ ಆಸಕ್ತರು ಭಾಗವಹಿಸದೇ ಇರುವುದರಿಂದ ಪ್ರಸ್ತುತ ಬಿಓಟಿ ಆಧಾರದ ಮೇಲೆ ವಾಣಿಜ್ಯ ಸಂಕೀರ್ಣ ನಿರ್ಮಿಸುವ ಯೋಜನೆಯನ್ನು ಕೈಬಿಡಲಾಗಿರುತ್ತದೆ. ಮುಂಬರುವ ದಿನಗಳಲ್ಲಿ ಅಗತ್ಯ ಸಮೀಕ್ಷೆ ನಡೆಸಿ ಆಸಕ್ತದಾರರು ಲಭ್ಯವಿದ್ದಲ್ಲಿ ಬಿಓಟಿ ಆಧಾರದ ಮೇಲೆ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.
8. ಸಾರಿಗೆ ಸಂಸ್ಥೆಯು ಒಂದು ಸೇವಾ ಸಂಸ್ಥೆಯಾಗಿದ್ದು, ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೇವೆ ನೀಡುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಆದ್ದರಿಂದ ಎಲ್ಲ ಅಂಶಗಳನ್ನು ವ್ಯವಹಾರಿಕ ತಂತ್ರಗಳ (Strategic Business Units) ಆಧಾರದ ಮೇಲೆ ಪರಿಗಣಿಸಲು ಅವಕಾಶವಿರುವುದಿಲ್ಲ. ಆದಾಗ್ಯೂ ಸಹ ಸಂಸ್ಥೆಯ

ನಿರ್ವಹಣೆ ವೆಚ್ಚಕ್ಕನುಗುಣವಾಗಿ ಸಾರಿಗೆ ಆದಾಯವನ್ನು ಕ್ರೋಢೀಕರಿಸಲು ಅಗತ್ಯ ಕ್ರಮಗಳನ್ನು ಕಾಲಕಾಲಕ್ಕೆ ಕೈಗೊಳ್ಳಲಾಗುತ್ತಿದೆ.

9. ಎಲ್ಲ ಘಟಕಗಳ ಮಾಸಿಕ ಕಾರ್ಯಾಚರಣೆ ವರದಿಯನ್ನು (Performance Appraisal Report) ಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಆಯಾ ತಿಂಗಳಿನ ಅಂದಾಜು ವರದಿಯನ್ನು ಮುಂದಿನ ತಿಂಗಳಿನ 2–3 ನೇ ತಾರೀಖಿನೊಳಗಾಗಿ ಸಿದ್ಧಪಡಿಸಿ, ಸದರಿ ವರದಿಯ ಫಲಿತಾಂಶಗಳನ್ನು ಅಭ್ಯಸಿಸಿ ಕಾರ್ಯಚರಣೆಯಲ್ಲಿ ಪ್ರಗತಿ ಕಂಡುಕೊಳ್ಳುವಂತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಸ್ಥೆಯ ತಾಂತ್ರಿಕ ಸಿಬ್ಬಂದಿಗಳಿಗೆ ಸಂಸ್ಥೆಯಲ್ಲಿ ಅಳವಡಿಸಿಕೊಳ್ಳಲಾಗುವ ನೂತನ ತಾಂತ್ರಿಕತೆ ಕುರಿತು ಹಾಗೂ ಖರೀದಿಸಲಾಗುವ ನೂತನ ತಾಂತ್ರಿಕತೆಯುಳ್ಳ ವಾಹನಗಳ ಬಗ್ಗೆ ನಿಯಮಿತವಾಗಿ ತಾಂತ್ರಿಕ ತರಬೇತಿ ನೀಡಲಾಗುತ್ತಿದೆ.

10. ಭಾರತೀಯ ಹಾಗೂ ವಿದೇಶಿ ಪ್ರವಾಸಿಗರಿಗಾಗಿ ವಿಶೇಷ ಸಾರಿಗೆ ಸೇವೆ (ವೈಫೈ ಹಾಗೂ ಅಂತರ್ಜಾಲ ವ್ಯವಸ್ಥೆಯುಳ್ಳ ಲಕ್ಸರಿ ವಾಹನಗಳು) ನೀಡುವ ಕುರಿತು ಇತರೆ ಅಂಗಸಂಸ್ಥೆಗಳಾದ ಕರಾರಸಾನಿ, ಬೆಮನಸಾ ಮತ್ತು ಈಕರಸಾಸಂಸ್ಥೆಯೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

11. Adoption of differential pricing: ಈ ಕುರಿತು ಎಲ್ಲ ಸಂಸ್ಥೆಗಳು ಏಕರೂಪವಾಗಿ ತೀರ್ಮಾನ ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ತಮ್ಮ ವಿಶ್ವಾಸಿ

ವ್ಯವಸ್ಥಾಪಕ ನಿರ್ದೇಶಕರು